**ಕರ್ನಾಟಕ ಸರ್ಕಾರ**

ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ: ಕಾಶಿಇ:263:ಮರುಹಂಚಿಕೆ:2013-14 ವ&ನಿ:ಭಾ-1

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ: 18-11-2013.

ಇವರಿಗೆ,

ಪ್ರಾದೇಶಿಕ ಜಂಟಿನಿರ್ದೇಶಕರು,
ಕಾಲೇಜು ಶಿಕ್ಷಣ ಇಲಾಖೆ,
ಪ್ರಾದೇಶಿಕ ಕಛೇರಿ,
ಬೆಂಗಳೂರು/ಮೈಸೂರು/ಶಿವಮೊಗ್ಗ/ಧಾರವಾಡ/ಮಂಗಳೂರು/ಗುಲ್ಬರ್ಗಾ.

ಮಾನ್ಯರೆ,

ವಿಷಯ: ಸ್ವಾಯತ್ತ ಖಾಸಗಿ ಅನುದಾನಿತ ಸಂಸ್ಥೆಗಳ ಬೋಧಕ ಸಿಬ್ಬಂದಿಯನ್ನು ಕಾಲೇಜುಗಳಲ್ಲಿಯೇ ಮುಂದುವರೆಸುವ ಬಗ್ಗೆ.

ಉಲ್ಲೇಖ: ಸರ್ಕಾರದ ಪತ್ರ ಸಂಖ್ಯೆ: ಇಡಿ: 309: ಯುಪಿಸಿ: 2013, ದಿನಾಂಕ:16.11.2013

*****

ಸೂಚಿತ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದಲ್ಲಿ ಕೇಂದ್ರ ಸರ್ಕಾರದ ಫ್ಲಾಗ್‌ಶಿಪ್ ಯೋಜನೆಯಾದ "RUSA" ಅನ್ನು ಅನುಷ್ಠಾನಗೊಳಸಬೇಕಾಗಿರುವ ಹಿನ್ನೆಲೆಯಲ್ಲಿ ಬೆಂಗಳೂರಿನ 04 ಸ್ವಾಯತ್ತ ಖಾಸಗಿ ಅನುದಾನಿತ ಕಾಲೇಜುಗಳಾದ 1) ಕ್ರೈಸ್ಟ್ ಕಾಲೇಜು 2) ಜ್ಯೋತಿ ನಿವಾಸ್ ಕಾಲೇಜು 3) ಮೌಂಟ್ ಕಾರ್ಮೆಲ್ ಕಾಲೇಜು 4) ಸಂತ ಜೋಸೆಫ್ ಕಲಾ ಮತ್ತು ವಿಜ್ಞಾನ ಕಾಲೇಜು, ಈ ಕಾಲೇಜುಗಳಲ್ಲಿ ಕಾರ್ಯಭಾರದ ಕೊರತೆಯಿಂದಾಗಿ ಇತರೆ ಖಾಸಗಿ ಅನುದಾನಿತ ಪದವಿ ಕಾಲೇಜು/ಸರ್ಕಾರಿ ಪದವಿ ಕಾಲೇಜುಗಳಿಗೆ ಮರುಹಂಚಿಕೆ ಮಾಡಿದ್ದಾಗ್ಯೂ ಮಾತೃ ಕಾಲೇಜಿನ ಕರ್ತವ್ಯದಿಂದ ಬಿಡುಗಡೆಗೊಳ್ಳದ 37 ಉಪನ್ಯಾಸಕರುಗಳನ್ನು ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಸ್ಥಳದಲ್ಲಿಯೇ ಮಾರ್ಚ್ 2014 ರವರೆಗೆ ಮುಂದುವರೆಸಲು ಅನುಮತಿ ನೀಡಲಾಗಿರುತ್ತದೆ.

ರಾಜ್ಯದ ಉಳಿದ ಸ್ವಾಯತ್ತ ಖಾಸಗಿ ಅನುದಾನಿತ ಕಾಲೇಜುಗಳ ಬೋಧಕ ಸಿಬ್ಬಂದಿಗಳನ್ನು ಕಾರ್ಯಭಾರದ ಕೊರತೆ ಹಿನ್ನೆಲೆಯಲ್ಲಿ ಇತರೆ ಅನುದಾನಿತ ಪದವಿ ಕಾಲೇಜು/ಸರ್ಕಾರಿ ಪದವಿ ಕಾಲೇಜುಗಳಿಗೆ ಮರುಹಂಚಿಕೆ ಮಾಡಿ ಸೇವೆಯಿಂದ ಬಿಡುಗಡೆಗೊಂಡಿರುವ ಉಪನ್ಯಾಸಕರ ಸೇವೆಯು ಮೇಲೆ ತಿಳಿಸಿದಂತೆ "RUSA" ಅನುಷ್ಠಾನಗೊಳಿಸಲು ಮಾತೃ ಕಾಲೇಜಿಗೆ ಕೋರಿದ್ದಲ್ಲಿ ಅವರುಗಳನ್ನೂ ಸಹ ಮಾತೃ ಕಾಲೇಜಿನಲ್ಲಿಯೇ ಮಾರ್ಚ್2014 ರವರೆಗೆ ಮುಂದುವರೆಸಲು ಅನುಮತಿ ನೀಡಲಾಗಿದೆ.

ಈ ವ್ಯವಸ್ಥೆಯನ್ನು ಶಿಕ್ಷಣ ಸಂಸ್ಥೆ ಹಾಗೂ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಪರಿಗಣಿಸಲಾಗಿದ್ದು, ಮಾರ್ಚ್ 2014ರ ಅಂತ್ಯದವರೆಗೆ ಮಾತ್ರ ಜಾರಿಯಲ್ಲಿರುತ್ತದೆ ಎಂದು ತಿಳಿಸಲಾಗಿದೆ. ಈ ಹಿನ್ನೆಲೆಯಲ್ಲಿ ತಮ್ಮ ಹಂತದಲ್ಲಿಯೇ ಅಗತ್ಯ ಕ್ರಮಕೈಗೊಂಡು ವರದಿಯನ್ನ ಈ ಕಛೇರಿಗೆ ಕಳುಹಿಸುವಂತೆ ಸೂಚಿಸಲಾಗಿದೆ.

**(ಕರಡು ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)**

ತಮ್ಮ ವಿಶ್ವಾಸಿ,

ಕಾಲೇಜು ಶಿಕ್ಷಣ ಮುಖ್ಯ ಆಡಳಿತಾಧಿಕಾರಿಗಳು

ಪ್ರತಿ

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ) ಬಹುಮಹಡಿಗಳ ಕಟ್ಟಡ, ಬೆಂಗಳೂರು - ಮಾಹಿತಿಗಾಗಿ.
2. ಕಛೇರಿ ಪ್ರತಿ.

*DCE.263 reply part 1*